ಎರಡು ಉಪನದಿಗಳಿವೆ. ಕೊರಟಗೆರೆ ತಾಲ್ಲೂಕು ಕ್ಯಾಮೇನಹಳ್ಳಿಯ ಬಳಿ ಗೌರಿಬಿದನೂರು ಕಡೆಯಿಂದ ಬರುವ ಗರುಡಾಚಲ ಹಾಗೂ ಅಕ್ಕಿರಾಂಪುರದ ಬಳಿ ಸಿದ್ದರಬೆಟ್ಟದ ಕಡೆಯಿಂದ ಬರುವ ಸುವರ್ಣಮುಖಿ ನದಿಗಳು ಜಯಮಂಗಲಿಗೆ ಸೇರಿ ಅಲ್ಲಿಂದ ಮುಂದಕ್ಕೆ ಹರಿವು ದೊಡ್ಡದಾಗುತ್ತದೆ. ಗರುಡಾಚಲವಂತೂ ಬಹುತೇಕ ವಿಸ್ಮೃತಿಗೆ ಸರಿದಿತ್ತು. ಈ ವರ್ಷ ಅದೂ ಸಹ ತನ್ನ ಜಾಡು ಕಂಡುಕೊಂಡಿರುವುದು ವಿಶೇಷ.

## ಬಿತ್ತಿ ಬೆಳೆಯುವ ಸಂಭ್ರಮದ ನೆನಪು

ನದಿ ಸಮೃದ್ಧವಾಗಿ ಹರಿಯುತ್ತಿದ್ದ ಕಾಲದಲ್ಲಿ ಭತ್ತ, ವೀಳ್ಯದೆಲೆ, ಕಬ್ಬು ಯಥೇಚ್ಛ ಬೆಳೆಯುತ್ತಿದ್ದರು. ಜಯಮಂಗಲಿ ನದಿ ಪಕ್ಕದಲ್ಲಿ ನೆಲೆಯಾಗಿರುವ ಅಕ್ಕಿರಾಂಪುರ ಹಾಗೂ ಎಲೆರಾಂಪುರ ಗ್ರಾಮಗಳಿಗೆ ಆ ಹೆಸರು ಬರಲು ಆಯಾ ಬೆಳೆಗಳ ಸಮೃದ್ಧತೆಯೇ ಕಾರಣ. ಅಲ್ಲದೆ ನದಿ ನೀರನ್ನು ಬಳಸಿ ಹಾಲುಬ್ಬಲು, ಕೊಯಮತ್ತೂರು ಸಣ್ಣ, ಬರೋಡ ಭತ್ತ, ದೇವಮಲ್ಲಿಗೆ, ಹಂಸ ಉತ್ಯಾದಿ ಅನೇಕ ದೇಸಿ ತಳಿಗಳನ್ನು ಬೆಳೆಯಲಾಗುತ್ತಿತ್ತು. ನದಿ ಬರಡಾಗುತ್ತಿದ್ದಂತೆ ಅಂತರ್ಜಲ ಕುಸಿದು ಭತ್ತ ಬೆಳೆಯುವುದೇ ಕಡಿಮೆಯಾಯಿತು. ಆ ತಳಿಗಳೂ ಅಳಿದವು.

ಹದಿನಾರನೇ ಶತಮಾನದಲ್ಲಿ ಮಧುಗಿರಿಯನ್ನು ಇಮ್ಮಡಿ ಚಿಕ್ಕಪ್ಪಗೌಡರು ಆಳುತ್ತಿದ್ದಾಗ ಅವರ ಸಾಮಂತರಾಗಿದ್ದ ತೆರಿಯೂರು ಸಂಸ್ಥಾನದ ಪಾಳೆಯಗಾರರು ಜಯಮಂಗಲಿ ನದಿ ಪಕ್ಕದಲ್ಲೇ ದೇವಾಲಯಗಳನ್ನು ನಿರ್ಮಿಸಿದ್ದರಂತೆ. ಈಗಲೂ ಇಲ್ಲಿ ಚೌಡೇಶ್ವರಿ ದೇವಾಲಯವಿದೆ.

1985ರಲ್ಲಿ ಈ ನದಿಗೆ ಗೊರವನಹಳ್ಳಿ ಬಳಿಯ ತೀತಾ ಗ್ರಾಮದಲ್ಲಿ ಜಲಾಶಯ ನಿರ್ಮಿಸಲಾಯಿತು. ಆಗಿನಿಂದ ಎರಡೇ ಸಲ ಈ ಜಲಾಶಯ ಕೋಡಿ ಬಿದ್ದಿದೆ. 1991ರಲ್ಲಿ ಹಾಗೂ ಈ ವರ್ಷ. ಹಿರಿಯರ ನೆನಪುಗಳ ಪ್ರಕಾರ, 70–80ರ ದಶಕದಲ್ಲಿ ಈ ನದಿಯು ಪ್ರತಿವರ್ಷ ಕನಿಷ್ಠ ಎರಡು ಮೂರು ತಿಂಗಳಾದರೂ ಹರಿಯುತ್ತಿತ್ತು. ಚೆನ್ನಾಗಿ ಮಳೆಯಾದ ವರ್ಷ 6 ತಿಂಗಳು ಕಾಯಂ ನೀರಿನ ಹರಿವು. ಇಷ್ಟು ಹರಿದರೆ ಸಾಕಿತ್ತು ಆಗ. ಉಳಿದ ಅವಧಿಯಲ್ಲಿ ನದಿ ಪಕ್ಕದ ಬಾವಿಗಳು, ಕೆರೆಗಳು, ತಲಪರಿಗೆಗಳು ನೀರಿನಿಂದ ಸಮೃದ್ಧವಾಗಿರುತ್ತಿದ್ದವು.

ಜಯಮಂಗಲಿ ನದಿಯ ರಭಸವನ್ನು ಯರಪನಹಳ್ಳಿಯ ವೀರಣ್ಣ ಹೀಗೆ ನೆನಪಿಸಿಕೊಳ್ಳುತ್ತಾರೆ: 'ನಮ್ಮ ಹೊಲ ನದಿಯ ಪಕ್ಕದಲ್ಲೇ ಇದೆ. ಮಳೆಗಾಲದ ಒಂದು ದಿನ ನದಿ ದಾಟಿ ಹೊಲಕ್ಕೆ ಹೋದಾಗ ದೇವರಾಯನದುರ್ಗದ ಕಡೆಯಿಂದ ಮರ್ರೋ ಎಂಬ ಶಬ್ದ. ಸ್ವಲ್ಪ ಹೊತ್ತಿನಲ್ಲೇ ನದಿಯಲ್ಲಿ ನೀರಿನ ರಭಸ ಜೋರಾಯಿತು. ಎರಡು ದಿನ ಹೊಲದಲ್ಲೇ ಇದ್ದು ನದಿ ಇಳಿದ ಮೇಲೆ ಮನೆಗೆ ಬಂದೆ.'

ತೊಂಬತ್ತರ ದಶಕದಲ್ಲಿ ನದಿ ಹರಿದಾಗ



ಕೊಡಿಗೇಹಳ್ಳಿ ಹೋಬಳಿಯ ವೀರಾಪುರ–ಕಾಳೇನಹಳ್ಳಿ ಮಧ್ಯೆ ಜಯಮಂಗಲಿ ನದಿಗೆ ನಿರ್ಮಿಸಿರುವ ಸೇತುವೆ ಮೇಲೆ ನೀರು ಹರಿಯುತ್ತಿರುವುದನ್ನು ಕಂಡು ಯುವಕರ ಸಂಭ್ರಮ.



ತೀತಾ ಜಲಾಶಯ



ಕೊಡಿಗೇನಹಳ್ಳಿ ಹೋಬಳಿಯ ರೆಡ್ಡಿಹಳ್ಳಿ ಗ್ರಾಮದ ಸಮೀಪ ಮೈದುಂಬಿಕೊಂಡಿರುವ ಜಯಮಂಗಲಿ